ಪಿಡಬ್ಲ್ಯೂ -1 ಓ.ಎಸ್.ನಂ. 289/2022

ದಿನಾಂಕಃ 01-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರಿದ ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ.ಎನ್ ಎಂ ಎನ್ ವಕೀಲರಿಂದ

ಇಂಗ್ಲೀಷ್ ಓದಲು ನನಗೆ ಬರುವುದಿಲ್ಲ. ವಾದಿ ಲಕ್ಷ್ಮಮ್ಮನವರೇ ದಾವಾ ಆಸ್ತಿಯ ಸ್ವಾಧೀನ ಇರುತ್ತಾರೆ ಎಂಬುದಕ್ಕೆ ಯಾವುದಾದರೂ ದಾಖಲೆ ಹಾಕಿರುತ್ತೀರಾ ಎಂದರೆ ಕರಾರು ಪತ್ರವನ್ನು ಹಾಕಿರುತ್ತೇನೆ ಕಂದಾಯ ಇಲಾಖೆಯವರಿಗೆ ಸ್ವಾಧೀನ ಇರುತ್ತೇವೆ ಎಂದು ತೋರಿಸಲು ಕಂದಾಯವನ್ನು ಕಟ್ಟಿರುತ್ತೀರಾ ಎಂದರೆ ಇಲ್ಲ. ಕ್ರಯ ಪತ್ರ ಮಾಡಿಸಲು ಕಾನೂನು ಅಡಚಣೆ ಇತ್ತು ಆದರೆ ಯಾವಾಗಿನಿಂದ ಎಲ್ಲಿಯವರೆಗೆ ಅಂತ ಗೊತ್ತಿರುವುದಿಲ್ಲ. ಅಡಚಣೆ ಉಂಟಾದ ಮೇಲೆ ಕ್ರಯ ಪತ್ರವನ್ನು ಮಾಡಿಸಿಕೆಕೊಳ್ಳಬಹುದು ಅಂತ ಆದ ಮೇಲೆ ಕ್ರಯ ಪತ್ರ ಮಾಡಿಸಿಕೊಂಡಿರುತ್ತೀರಾ ಎಂದರೆ ಇಲ್ಲ. ಜುಲೈ 2022 ರಲ್ಲಿ ಪ್ರತಿವಾದಿಯರು ಬಂದು ಅಡಚಣೆ ಮಾಡಿರುತ್ತಾರೆ ಅಂತ ಹೇಳಿದ್ದು ಯಾವಾಗ ಏನು ಎಂದರೆ ಗೊತ್ತಿರುವುದಿಲ್ಲ. ನಿಪಿ.3 ಕ್ರಯ ಪತ್ರವು ಪ್ರತಿವಾದಿಗಳ ತಾಯಿ ನಾರಾಯಣಮ್ಮನಿಗೆ ಸೇರಿದ ಕ್ರಯ ಪತ್ರ ಎಂದರೆ ಹೌದು . ನಾರಾಯಣಮ್ಮನಿಗೆ ಕ್ರಯ ಆಗಿರುವ ಇ ಸಿ ಯನ್ನು ಹಾಜರುಪಡಿಸಿರುತ್ತೀರಿ ಎಂದರೆ ಹೌದು. ನೀವು ಹಾಜರುಮಾಡಿರುವ ಎಲ್ಲಾ ಪಹಣಿ ಪತ್ರಿಕೆಗಳು ನಾರಾಯಣಮ್ಮನಿಗೆ ಸೇರಿದ ಜಮೀನು ಎಂದರೆ ಸರಿ. ನಿಪಿ.3 ಕರಾರು ಪತ್ರವನ್ನು ಸಾಲದ ಭದ್ರತೆಗಾಗಿ ಇಟ್ಟುಕ್ಕೊಂಡಿದ್ದು ಸಾಲ ತೀರಿದ ನಂತರ ಕೇಳಿದರೂ ಕೊಟ್ಟಿರುವುದಿಲ್ಲ ಎಂದರೆ ಸಾಲ ತೀರಿಸಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ಸಾಲ ಅಲ್ಲ ಕ್ರಯಕ್ಕೆ ಮಾಡಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಕೃಷ್ಣಾರೆಡ್ಡಿ ರವರ ಅಳಿಯ ಎಂದರೆ ಹೌದು. ಕೃಷ್ಣಾರೆಡ್ಡಿ ರವರಿಗೆ ಗಂಡು ಮಕ್ಕಳು ಇಲ್ಲ ಎಂದರೆ ಇದ್ದರು ಈಗ ತೀರಿಕೊಂಡಿರುತ್ತಾರೆ. ಲಕ್ಷ್ಮಮ್ಮನಿಗೆ ನೀಡಿದ ಎಲ್ಲಾ ಸಾಲವನ್ನು ವಾಪಸ್ಸು ನೀಡಿದ್ದರೂ ಅವರಿಗೂ ದಾವೆ ನಡೆಸಲು ಹಿತಾಸಕ್ತಿ ಇಲ್ಲದಿದ್ದರೂ ಕೂಡ ನೀವೇ ಸ್ವಂತ ಜಿ ಪಿ ಎ

ಪಡೆದು ನಡೆಸುತ್ತಿದ್ದೀರಿ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಅಟ್ಟೂರ್ರುನಲ್ಲಿ ಇರುತ್ತಾರೆ ಎಂದರೆ ಸರಿ, ಆತ ಚಿಕ್ಕಮ್ಮನ ಮಗ. 2 ನೇ ಪ್ರತಿವಾದಿ ದೂರದಲ್ಲಿ ಇದ್ದು ಜಮೀನನ್ನು ಅವರೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಜುಲೈ 2022 ರಲ್ಲಿ ಬಂದೇ ಇರುವುದಿಲ್ಲ ಅವರ ಸ್ವಾಧೀನಕ್ಕೆ ನೀವೇ ತೊಂದರೆ ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ಪ್ರತಿವಾದಿಯರು ಸ್ವಾಧೀನಕ್ಕೆ ಬಂದಿರುತ್ತಾರೆ ಅಂತ ಸುಳ್ಳು ದಾವೆ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.